**ಸಿ.ಸಿ.ಸಂ.890/16**
**DW-1**

**ದಿನಾಂಕಃ20.12.2025ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲು ಪಿರ್ಯಾದುದಾರರ ಪರವಾಗಿ ಶ್ರೀ. ಸಿ.ಎಲ್.ಎಸ್., ವಕೀಲರಿಂದಃ-**

ನಾನು ದ್ವಿತೀಯ ಪಿಯುಸಿರವರೆಗೆ ಓದಿರುತ್ತೇನೆ. ನಾನು ವೃತ್ತಿಯಲ್ಲಿ ವ್ಯವಸಾಯ ಕೆಲಸ ಮಾಡುತ್ತಿದ್ದೇನೆ. ತಾವು ಪಿರ್ಯಾದುದಾರರು ಚೀಟಿ ವ್ಯಾವಹಾರ ಮಾಡುತ್ತಿದ್ದಾರೆ ಎಂದು ಹೇಳಿದ್ದು, ತಾವು ಅವರ ಬಳಿ ಚೀಟಿ ಏನಾದರೂ ಹಾಕಿದ್ದರಾ ಎಂದರೆ ಸಾಕ್ಷಿ ನಾನು ಅವರ ಬಳಿ ಚೀಟಿ ಹಾಕಿರಲಿಲ್ಲ, ಬದಲಾಗಿ ನಾಗರಾಜು ಎಂಬುವವರ ಬಳಿ ಚೀಟಿ ಹಾಕಿದ್ದೆನು ಎನ್ನುತ್ತಾರೆ. ಪಿರ್ಯಾದುದಾರರು ಚೀಟಿ ವ್ಯವಹಾರ ಮಾಡುತ್ತಿರಲಿಲ್ಲ ಎಂದರೆ ನನಗೆ ಗೊತ್ತಿಲ್ಲ. ನಾನು ಈ ಕೇಸಿನ ವಿವಾದಿತ ಚೆಕ್ಕನ್ನು ಹಣದ ಭದ್ರತೆಗಾಗಿ ನಾಗರಾಜು ಎಂಬುವವರಿಗೆ ಕೊಟ್ಟಿದ್ದೆ. ನನ್ನ ಮುಖ್ಯ ಸಾಕ್ಷ್ಯ ವಿಚಾರಣೆಯಲ್ಲಿ ಈ ಕೇಸಿನ ವಿವಾದಿತ ಚೆಕ್ಕನ್ನು ನಾಗರಾಜುರವರಿಗೆ ಭದ್ರತೆಗಾಗಿ ಕೊಟ್ಟಿದ್ದೆ ಎಂದು ಹೇಳಿದ್ದೀರಾ ಎಂದರೆ ಹೌದು ಎನ್ನುತ್ತಾರೆ.  ಸದರಿ ವಿಚಾರವನ್ನು ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿಲ್ಲ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎನ್ನುತ್ತಾರೆ. ನಾಗರಾಜು ಚೀಟಿ ನಡೆಸುತ್ತಿದ್ದ ತಾವು ಆತನ ಬಳಿ ಚೀಟಿ ಕಟ್ಟುತ್ತಿದ್ದೆ ಎಂದು ಹೇಳಿದ್ದು ಅವರ ಬಳಿ ಎಷ್ಟು ಜನ ಚೀಟಿ ಹಾಕಿದ್ದರು ಎಂದರೆ ಸಾಕ್ಷಿ ಎಷ್ಟು ಜನ ಎಂದು ನನಗೆ ಗೊತ್ತಿಲ್ಲ ಎನ್ನುತ್ತಾರೆ. ಪಿರ್ಯಾದುದಾರರು ನಾಗರಾಜುರವರ ಬಳಿ ಚೀಟಿ ಹಾಕಿದ್ದರು ಎಂದರೆ ನನಗೆ ಗೊತ್ತಿಲ್ಲ. ನಾಗರಾಜು ಚೀಟಿ ನಡೆಸುತ್ತಿದ್ದರು ಎಂದು ಹೇಳಿದ್ದು ಅವರನ್ನು ನ್ಯಾಯಾಲಯಕ್ಕೆ ಕರೆಸಿ ವಿಚಾರಣೆ ಮಾಡಿಸುತ್ತೀರಾ ಎಂದರೆ ಸಾಕ್ಷಿ ಅವರು ಬರುವುದಿಲ್ಲ ಎನ್ನುತ್ತಾರೆ.

2. ಪಿರ್ಯಾದುದಾರರು ಕೇಸನ್ನು ದಾಖಲು ಮಾಡುವ ಪೂರ್ವದಲ್ಲಿ ವಕೀಲರ ಮೂಲಕ ತಿಳುವಳಿಕೆ ನೋಟೀಸ್ ಕೊಡಿಸಿದ್ದರು ಎಂದರೆ ಸಾಕ್ಷಿ ನನಗೆ ಬಂದಿಲ್ಲ ಎನ್ನುತ್ತಾರೆ.

ನಿ.ಪಿ.6 ಅಂಚೆ ಹಿಂಬರಹದಲ್ಲಿರುವ ಸಹಿ ತಮ್ಮದಾ ಎಂದು ತೋರಿಸಿ ಕೇಳಲಾಗಿ ಸಾಕ್ಷಿ ತಮ್ಮದಲ್ಲ ಎನ್ನುತ್ತಾರೆ. ನಿ.ಪಿ.6 ಮತ್ತು ನಾನು ಮುಖ್ಯ ವಿಚಾರಣೆ ನೀಡಿದ ವಿಚಾರಣಾ ಪ್ರಮಾಣ ಪತ್ರದಲ್ಲಿ ಇರುವ ಸಹಿ ಎರಡೂ ಒಂದೇ ಎಂದರೆ ಸಾಕ್ಷಿ ಎರಡೂ ಬೇರೆ ಬೇರೆ ಎನ್ನುತ್ತಾರೆ. ಸದರಿ ಸಹಿಗಳು ಒಂದೇ ತರಹ ಇದ್ದು ತಾವೇ ಸಹಿ ಮಾಡಿದ್ದರೂ ನನ್ನ ಸಹಿಯಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪಿರ್ಯಾದುದಾರನು ನನ್ನ ತಾಯಿಯ ಊರು ಎಲೆಕೇರಿ ಗ್ರಾಮದವ ಎಂದರೆ ಸಾಕ್ಷಿಯು ನನ್ನ ತಾಯಿಯ ಊರು ಎಲೆಕೇರಿ, ಆದರೆ ಪಿರ್ಯಾದುದಾರರು ಯಾವ ಊರು ಎಂದು ನನಗೆ ಗೊತ್ತಿಲ್ಲ ಎನ್ನುತ್ತಾರೆ. ಪಿರ್ಯಾದುದಾರರು ಎಲೆಕೇರಿ ಗ್ರಾಮದವರು ಮತ್ತು ಪರಿಚಯಸ್ಥರಿದ್ದರೂ ಗೊತ್ತಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾಗರಾಜು ಚೀಟಿ ವ್ಯವಹಾರ ಮಾಡುತ್ತಿದ್ದರು ಎಂದು ಹೇಳಿದ್ದು ಈ ಬಗ್ಗೆ ನ್ಯಾಯಾಲಯಕ್ಕೆ ದಾಖಲೆ ಹಾಜರುಪಡಿಸಿದ್ದೀರಾ ಎಂದರೆ ಇಲ್ಲ ಎನ್ನುತ್ತಾರೆ. ಪಿರ್ಯಾದುದಾರರಿಂದ 5 ಲಕ್ಷ ಹಣವನ್ನು ಪಡೆದು ಆತನಿಗೆ ಮರುಪಾವತಿ ಮಾಡದೇ ಇದ್ದುದ್ದರಿಂದ ಆತ ವಕೀಲರಿಂದ ಕಳುಹಿಸಿದ ನೋಟೀಸ್ ನನಗೆ ತಲುಪಿದ್ದರೂ ನೋಟೀಸ್ ತಲುಪಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

3. ದೊಡ್ಡಮಳೂರು ಗ್ರಾಮದ ರಸ್ತೆಯ ಪಕ್ಕದಲ್ಲಿ ಹಾಲು ಉತ್ಪಾದಕರ ಸಹಕಾರ ಸಂಘ ಇದೆ ಎಂದರೆ ಸರಿ. ಸದರಿ ಹಾಲು ಉತ್ಪಾದಕರ ಸಹಕಾರ ಸಂಘದ ಎದುರು ಸಿದ್ದೇಗೌಡ ಎಂಬ ಹೆಸರಿನ ವೈನ್ಸ್ ಸ್ಟೋರ್ ಇತ್ತು ಎಂದರೆ ನನಗೆ ಗೊತ್ತಿಲ್ಲ. ತಾವು ತಮ್ಮ ಪರ ವಕೀಲರು ಪಿರ್ಯಾದುದಾರರಿಗೆ ತಾವು ಆರೋಪಿತನಿಗೆ ಸದರಿ ಮೊತ್ತದ ಹಣವನ್ನು ಸಾಲವಾಗಿ ಕೊಡಲು ಶಕ್ತಿ ಇರಲಿಲ್ಲ ಮತ್ತು ತಾವು ವೈನ್ಸ್ ಸ್ಟೋರ್ ಗೆ ಆದಾಯ ತೆರಿಗೆ ಕಟ್ಟುತ್ತಿರಲಿಲ್ಲ ಎಂದು ಹೇಳಿದ್ದು, ಈ ಸಂಬಂಧ ಪಿರ್ಯಾದುದಾರರು ವೈನ್ಸ್ ಸ್ಟೋರ್ ನಡೆಸುತ್ತಿದ್ದರು ಎಂಬ ಬಗ್ಗೆ ದಾಖಲೆಯನ್ನು ತೋರಿಸಿ ಸದರಿ ದಾಖಲೆಯಲ್ಲಿ ಪಿರ್ಯಾದುದಾರರ ಫೋಟೋ ಇದ್ದು ಸಾಕ್ಷಿ ನೋಡಿ ಗುರುತಿಸಿದ ಮೇರೆಗೆ ಸದರಿ

ದಾಖಲೆಯನ್ನು ನಿ.ಪಿ.7 ಎಂದು ಗುರುತಿಸಲಾಯಿತು. ಪಿರ್ಯಾದುದಾರರು ಆದಾಯ ತೆರಿಗೆ ಪಾವತಿದಾರರಾಗಿದ್ದು ಅವರು ಆರ್ಥಿಕವಾಗಿ ಚೆನ್ನಾಗಿದ್ದು ಅವರಿಂದ 5 ಲಕ್ಷ ಹಣವನ್ನು ಸಾಲವಾಗಿ ಪಡೆದಿರುತ್ತೇನೆ ಎಂದರೆ ಸರಿಯಲ್ಲ. ಪಿರ್ಯಾದುದಾರರು ವ್ಯವಸಾಯದ ಜಮೀನು ಹೊಂದಿರುತ್ತಾರೆ ಎಂದರೆ ಸಾಕ್ಷಿ ಮೌನವಾಗಿರುತ್ತಾರೆ.

4. ಮಂಗಳವಾರಪೇಟೆ ಗ್ರಾಮದಲ್ಲಿರುವ ನನ್ನ ತಂದೆಗೆ ಸೇರಿದ ಮನೆಯನ್ನು ನೆಲಸಮಗೊಳಿಸಿರುತ್ತೇನೆ ಎಂದರೆ ಸರಿ. ಸದರಿ ಜಾಗದಲ್ಲಿ ಹೊಸ ಮನೆ ಕಟ್ಟಲು ಪಿರ್ಯಾದುದಾರರಿಂದ 5 ಲಕ್ಷ ಹಣ ಪಡೆದಿದ್ದೇನೆ ಎಂದರೆ ಸರಿಯಲ್ಲ. ಪಿರ್ಯಾದುದಾರರಿಂದ 5 ಲಕ್ಷ ಹಣವನ್ನು ಸಾಲವಾಗಿ ಪಡೆದಿದ್ದರೂ ವಾಪಸ್ಸು ಕೊಡಬೇಕಾಗುತ್ತದೆ ಎಂದು ಯಾವುದೇ ಹಣ ಕೊಡಬೇಕಾಗಿಲ್ಲ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾಗರಾಜು ಎಂಬುವವರಿಗೂ ಈ ಹಣಕಾಸಿನ ವ್ಯವಹಾರಕ್ಕೂ ಯಾವುದೇ ಸಂಬಂಧ ಇಲ್ಲ, ವಿನಾಕಾರಣ ಆತನ ಹೆಸರನ್ನು ಈ ಕೇಸಿನಲ್ಲಿ ತರುತ್ತಿದ್ದೇನೆ ಎಂದರೆ ಸರಿಯಲ್ಲ. ನಾಗರಾಜು ಅವರಿಗೆ ತಾವು ನಿ.ಪಿ.1 ಚೆಕ್ಕನ್ನು ಕೊಟ್ಟಿದ್ದೇನೆ ಎಂದು ಹೇಳಿದ್ದು ಆತನನ್ನು ಕರೆಸಿ ಸಾಕ್ಷ್ಯ ವಿಚಾರಣೆ ಮಾಡಿ ದಾಖಲಾತಿಗಳನ್ನು ಹಾಜರುಪಡಿಸುತ್ತಿದ್ದೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**
(ತೆರದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕರಣ ಮಾಡಲಾಯಿತು.)

ಓ. ಹೇ. ಕೇ. ಸರಿ ಇದೆ.

ಅಪರ ಸಿವಿಲ್ ನ್ಯಾಯಾಧೀಶರು ಹಾಗೂ ಜೆಎಂಎಫ್‌ಸಿ
ನ್ಯಾಯಾಲಯ, ಚನ್ನಪಟ್ಟಣ.